**3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ**

**CC 3281/2023** **PW- 1**

ದಿಃ **13.12.2024** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

ಮುಂದುವರೆದ ಪಾಟಿಸವಾಲುಃ ಆರೋಪಿ ಪರ ವಕೀಲರಿಂದಃ

ನನ್ನ ಹಾಗೂ ನಮ್ಮ ಸಂಸ್ಥೆಯ ಖಾತೆ ಎರಡೂ ಸಹ ಯುನಿಯನ್ ಬ್ಯಾಂಕ ಎಲ್ ಐ ಸಿ ಬ್ರಾಂಚ್ ನಲ್ಲಿದೆ. ಯುನಿಯನ್ ಬ್ಯಾಂಕ್ ಎಲ್ ಐ ಸಿ ಶಾಖೆಯಲ್ಲಿ ನಾನು ಒಳ್ಳೆಯ ವ್ಯವಹಾರ ಕೊಡುವ ಗ್ರಾಹಕ ಎಂದರೆ ಸರಿ. ನೀವು ನಿಮ್ಮ ಕುಟುಂಬದವರು, ನಿಮ್ಮ ಕಾರ್ಕೂನರು ಯಾವಾಗಲೂ ಬ್ಯಾಂಕಿಗೆ ಹೋಗಿಬರುವುದನ್ನು ಮಾಡುತ್ತೀರಿ ಎಂದರೆ ಸಾಕ್ಷಿ ನಮ್ಮ ಕುಟುಂಬದವರು ಹೋಗುವುದಿಲ್ಲ ನಾನು ಒಂದೆರಡು ಬಾರಿ ಹೋಗಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಹಾಗೂ ನಮ್ಮ ಕಾರ್ಕೂನರು ಬ್ಯಾಂಕ ಮ್ಯಾನೇಜರ್ ಜೊತೆ ಒಳ್ಳೆಯ ಒಡನಾಟ ಹೊಂದಿರುತ್ತೇವೆ ಎಂದರೆ ಸಾಕ್ಷಿ ಒಡನಾಟ ಇಲ್ಲ ಆದರೆ ವ್ಯವಹಾರ ಇದೆ ಎಂದು ನುಡಿಯುತ್ತಾರೆ. ಆರೋಪಿಗೆ ಸೇರಿದ ಜೈ ಗಂಗಾ ಟ್ರೆಡಿಂಗ ಕಂಪನಿ ಖಾತೆಯನ್ನು ಮೊಟ್ಟಮೊದಲು ಬಾರಿಗೆ 2020 ರಲ್ಲಿ ಯುನಿಯನ್ ಬ್ಯಾಂಕನಲ್ಲಿ ತೆರೆಯಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ಅವರು ಅಕೌಂಟ ತೆರೆದಿರುತ್ತಾರೆ. ಆರೋಪಿ ಯುನಿಯನ್ ಬ್ಯಾಂಕನಲ್ಲಿ ಯಾವ ವರ್ಷ ಹಾಗೂ ದಿನಾಂಕದಂದು ಖಾತೆ ತೆರೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಯಾವದೇ ಬ್ಯಾಂಕನಲ್ಲಿ ಖಾತೆ ತೆರೆಯಬೇಕಾದರೆ ಅದೇ ಬ್ಯಾಂಕನ ಗ್ರಾಹಕರ ಕಡೆಯಿಂದ ಬೇರೆ ಗ್ರಾಹಕರನ್ನು introduce ಮಾಡಲಾಗುತ್ತದೆ ಎಂದರೆ ಸರಿ. 2020 ರಲ್ಲಿ ಆರೋಪಿ ಯುನಿಯನ್ ಬ್ಯಾಂಕ ಖಾತೆಗೆ ತೆರೆಯುವಾಗ ನಾನೇ ಅವರಿಗೆ ಪ್ರಪೊಸರ್ ಎಂದು ಹೇಳಿ ಸಹಿ ಮಾಡಿರುತ್ತೇನೆ ಎಂದರೆ ಸರಿ. ಸಾಕ್ಷಿಗೆ ಒಂದು ಅಕೌಂಟ ಒಪನಿಂಗ ಫಾರ್ಮನ ಧೃಡಿಕೃತ ಪ್ರತಿಯನ್ನು ತೋರಿಸಲಾಗಿ ಸಾಕ್ಷಿ ಅದನ್ನು ಒಪ್ಪಿದ್ದು ನಿಡಿ.2 ಎಂದು ಗುರುತಿಸಲಾಯಿತು. ಸದರಿ ದಾಖಲೆಯಲ್ಲಿ ಆರೋಪಿಯ ಸಹಿ ಮತ್ತು ಪೊಟೊ ಇದೆ ಎಂದರೆ ಸರಿ. ನಿಡಿ.2 ರ ಪ್ರಕಾರ ಖಾತೆ ತೆರೆಯುವಾಗ ನಾನು ಹಾಗೂ ನನ್ನ ಕಾರ್ಕೂನ ಅಣವಿರಪ್ಪ ಆರೋಪಿ ಜೊತೆ ಇದ್ದೀರಿ ಎಂದರೆ ಸಾಕ್ಷಿ ನನಗೆ ನೆನಪಿಲ್ಲ ಇದ್ದರೂ ಇರಬಹುದು ಅಥವಾ ಆರೋಪಿ ನನ್ನ

ಹತ್ತಿರ ಬಂದು ಪಾರ್ಮ ಮೇಲೆ ಸಹಿ ಪಡೆದುಕೊಂಡು ಹೋಗಿರಬಹುದು ಎಂದು ನುಡಿಯುತ್ತಾರೆ. ಆರೋಪಿ ಖಾತೆ ತೆರೆಯುವ ಪ್ರಾರಂಭದಲ್ಲಿ ನಾನೇ 6 ಸಾವಿರ ರೂ.ಗಳನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ಈ ಹಂತದಲ್ಲಿ ಒಂದು ಸ್ಟೆಟಮೆಂಟ ಆಪ್ ಅಕೌಂಟನ ದೃಡಿಕೃತ ಪ್ರತಿಯನ್ನು ತೋರಿಸಿ ಅದು ಆರೋಪಿ ಸಂಸ್ಥೆಗೆ ಸೇರಿದ್ದು ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಸದರಿ ದಾಖಲೆಯನ್ನು ನಾನು ಪರಿಶೀಲನೆ ಮಾಡಬೇಕು ಮಾಡದೇ ಹೇಳಲು ಬರುವುದಿಲ್ಲ ಎಂದು ನುಡಿಯುತ್ತಾರೆ. ನಾನು ನನ್ನ ವ್ಯವಹಾರಕ್ಕೆ ಅನುಕೂಲವಾಗುವ ರೀತಿಯಲ್ಲಿ ಯುನಿಯನ್ ಬ್ಯಾಂಕ್ ಆಪ್ ಇಂಡಿಯಾದಲ್ಲಿ ಆರೋಪಿ ಖಾತೆ ತೆರೆಯಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿ ಹೊಂದಿದ ಸದರಿ ಖಾತೆಯಲ್ಲಿ ನನ್ನ ಜೊತೆ ಮಾಡಿದ ವ್ಯವಹಾರ ಹೊರತುಪಡಿಸಿ ಬೇರೆ ಯಾರ ಜೊತೆ ವ್ಯವಹಾರ ಮಾಡಿಲ್ಲ ಎಂದರೆ ಸಾಕ್ಷಿ ಅದು ಅವರ ಖಾತೆ ಅವರಿಗೆ ಗೊತ್ತು ಎಂದು ನುಡಿಯುತ್ತಾರೆ. ಯಾವದೇ ಬ್ಯಾಂಕ ಮುಖಾಂತರ ಹಣ ಪಡೆಯಬೇಕಾದರೆ ಅಥವಾ ಹಣ ಜಮಾ ಮಾಡಬೇಕಾದರೆ ಬ್ಯಾಂಕ ಸ್ಲಿಪ್ ಮೇಲೆ ಹಣ ಪಡೆಯುವರ ಹಾಗೂ ಹಣ ಜಮಾ ಮಾಡುವವರ ಸಹಿ ಇರುತ್ತದೆ ಎಂದರೆ ಸರಿ. ಆರೋಪಿ ಖಾತೆಗೆ ಜಮಾ ಮಾಡಿದ ಹಾಗೂ ಹಿಂಪಡೆದ ಬ್ಯಾಂಕ ಸ್ಲಿಪ್ ಗಳ ಮೇಲೆ ನನ್ನ ಕಾರ್ಕೂನರ ಸಹಿ ಇದೆ ಎಂದರೆ ಸರಿಯಲ್ಲ.

9. ಬ್ಯಾಂಕ ಚೆಕ್ ಬುಕ ಪಡೆಯಬೇಕಾದರೆ ಖಾತೆ ಹೊಂದಿದವರು ಅರ್ಜಿ ನೀಡಬೇಕು ಎಂದರೆ ಸರಿ. ಚೆಕ್ ಬುಕ್ಕನ್ನು ಖಾತೆದಾರನಿಗೆ ಹೊರತುಪಡಿಸಿ ಬೇರೆ ವ್ಯಕ್ತಿಗೆ ಕೊಡುವುದಿಲ್ಲ ಎಂದರೆ ನಿಜ. ದಿಃ 22.05.2023 ರಂದು ನನ್ನ ಕಾರ್ಕೂನ ಅಣವಿರಪ್ಪ ಇವರು ಆರೋಪಿ ಖಾತೆಗೆ ಸೇರಿದ 50 ಚೆಕ್ಕಗಳನ್ನು ಹೊಂದಿರುವ ಒಂದು ಚೆಕಬುಕ್ಕನ್ನು ಬ್ಯಾಂಕ ಮುಖಾಂತರ ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಅಣವಿರಪ್ಪ ಈತನು ನನ್ನ ಆತ್ಮಿಯನು ಎಂದು ಕೇಳಿಕೊಂಡು ಬ್ಯಾಂಕಿನಿಂದ ಚೆಕ್ ಪಡೆದುಕೊಂಡು ಬಂದಿದ್ದು ನಾನು ಸದರಿ ಚೆಕಗಳನ್ನು ದುರುಪಯೋಗಪಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ.1 ಚೆಕ್ ಮೇಲೆ ಇರುವ ಸಹಿ ಆರೋಪಿಗೆ ಸಂಬಂದಪಟ್ಟಿಲ್ಲ ಎಂದರೆ ಸರಿಯಲ್ಲ. ನಿಪಿ.1 ರ ಮೇಲೆ ನಾನೇ ಸಹಿ ಮಾಡಿ ಹಾಗೂ ನಾನೇ ಸೀಲ್ ತಯಾರಿಸಿ ಸದರಿ ಚೆಕ್ಕನ್ನು ಬ್ಯಾಂಕಿಗೆ ನಗದಿಕರಣಕ್ಕೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. 50 ಚೆಕ ಲಿಫ್ ಗಳ ಪೈಕಿ ನಿಪಿ.1 ಚೆಕ್ ಒಂದಾಗಿರುತ್ತದೆ ಎಂದರೆ ಸಾಕ್ಷಿ ಅದು ನನಗೆ ಗೊತ್ತಿಲ್ಲ ಆರೋಪಿಗೆ ನಿಪಿ.1 ಚೆಕ್ ನೀಡಿರುತ್ತಾರೆ ಎಂದು

ನುಡಿಯುತ್ತಾರೆ.

10. ತಮ್ಮ ಖಾತೆಗೆ ಸೇರಿದ ಚೆಕ್ ಬುಕ್ಕನ್ನು ಅಣವಿರಪ್ಪ ಇವರಿಗ ಯಾಕೆ ನೀಡಿರುತ್ತೀರಿ ಎಂದು ಆರೋಪಿ ನನ್ನ ಹಾಗೂ ಅಣವಿರಪ್ಪ ಹಾಗೂ ಬ್ಯಾಂಕಿನವರ ವಿರುದ್ದ ಆರ್ ಬಿ ಐ ಹಾಗೂ ಟೌನ್ ಪೊಲೀಸ್ ಠಾಣೆಗೆ ಫಿರ್ಯಾದಿ ಸಲ್ಲಿಸಿರುತ್ತಾರೆ ಎಂದರೆ ನಿಜ. ಪೊಲಿಸನವರು ಸಿವಿಲ್ ಸರುಪದವ್ಯಾಜ್ಯ ಎಂದು ಆರೋಪಿಗೆ ಹಿಂಬರಹ ನೀಡಿ ಸದರಿ ಫಿರ್ಯಾದಿಯನ್ನು ಮುಕ್ತಾಯಗೊಳಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಅದು ಆರೋಪಿಗೆ ಗೊತ್ತು.

11. ನಾನು ಆರೋಪಿಗೆ 73,00,796/- ಕೊಡುವುದು ಬಾಕಿ ಇತ್ತು ಹಾಗಾಗಿ ನಾನೇ ಆರೋಪಿಯ ಸಹಿಯನ್ನು ನಿಪಿ.1 ರ ಮೇಲೆ ನಾನು ಖೊಟ್ಟಿ ಸಹಿ ಮಾಡಿ ಆರೋಪಿಗೆ ಹಣ ನೀಡಬಾರದು ಎಂಬ ಉದ್ದೇಶದಿಂದ ಅದನ್ನು ದುರುಪಯೋಗಪಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಆರೋಪಿಗೆ 70 ಲಕ್ಷ ಮೇಲ್ಪಟ್ಟು ಹಣ ಕೊಡುವುದು ಬಾಕಿ ಇತ್ತು ಎಂದು ಹೇಳಿದ್ದು ಸದರಿ ಮೊತ್ತವನ್ನು ಬ್ಯಾಂಕ್ ಮುಖಾಂತರ ನೀಡಿರುತ್ತೇನೆ. ಆ ಬಗ್ಗೆ ಅಕೌಂಟ ಸ್ಟೇಟ್ ಮೆಂಟ ಹಾಜರುಪಡಿಸಿರಬಹುದು. ಆರೋಪಿ ನನಗೆ ಯಾವದೇ ಹಣ ಕೊಡುವುದು ಬಾಕಿ ಇಲ್ಲ ಹಾಗೂ ನಾನೇ ನಿಪಿ. ರ ಮೇಲೆ ಆರೋಪಿಯ ಖೊಟ್ಟಿ ಸಹಿ ಮಾಡಿ ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ನೀವು ಅಣವಿರಪ್ಪನ ಸಾಕ್ಷಿ ಮಾಡಿಸಲು ನಿಮಗೆ ತೊಂದರೆ ಇಲ್ಲ ಎಂದರೆ ಸಾಕ್ಷಿ ನನಗೆ ಅಬ್ಯಂತರ ಇಲ್ಲ ಎಂದರೆ ಸಾಕ್ಷಿ ನೀವು ಮಾಡಿಸಿದರೆ ನನಗೆ ಅಬ್ಯಂತರ ಇಲ್ಲ ಎಂದು ನುಡಿಯುತ್ತಾರೆ. ನಾನು ಸಾಕ್ಷಿ ಮಾಡಿಸುವ ಪ್ರಶ್ನೆ ಬರುವುದಿಲ್ಲ ಎಂದು ನುಡಿಯುತ್ತಾರೆ.

ಮರು ವಿಚಾರಣೆ ಇಲ್ಲ.

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

Sd/-

(ಶ್ರೀಮತಿ ದೀಪಾ ಜಿ ಮನೇರಕರ)

3 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.